(*ii*) *re: allotment of land to a private School at Jayanagar which was reserved for a play ground by the BDA*

SRI M. CHANDRASEKHARA (Jayanagar).—I call the attention of the Minister for Municipal Administration to the allotment of land to a private school at Jayanagar 4th Block which was reserved by the BDA for play ground.

SRI H. C. SRIKANTAIAH (Minister for Municipal Administration).—I wish to make the following statement :

Vacant land measuring 45.70 × 99.00 meters at 16th Main Road, 38th Cross, 4th 'T' Block, Jayanagar, Bangalore was recommended for construction of a School Building on the representation of the General Secretary, Holy Saint Education Society, 4th 'T' Block Jayanagar, Bangalore for a period of 50 years as the Bangalore Development Authority vide their letter No. DDTP/085/75-76 dated 13th February 1976 have issued No Objection in favour of General Secretary, Holy Saint Education Society, to secure the above plot from the Corporation. The Subject was placed before the Administrator and as per the proceeding of the Administrator dated 24th October 1976 approval was accorded for the lease of land under reference for a period of 50 years on a lease amount of Rs. 1.000 per annum subject to the following conditions ;—

(a) The institution should complete the construction within a period of 3 years.

(b) The building should confirm to the Building Bye-laws and adequate space as may be indicated by the Commissioner is kept open for use as Play Ground for the Children of the School.

This was recommended to the Government to obtain the sanction of the Government. The Government in their Order No. HMA 43 MNG 77 dated 3rd May 1977 accorded sanction to the Administrator's Proceedinge dated 24th October 1976.

Further on a Report of the Deputy Revenue Officer (General) Regarding the paper cutting inrespect of the site under reference allotted to the School depriving its use by the residents of the locality for the play ground etc., Government was addressed *vide* No. APS/682/77-78 dated 26th September 1977, requesting for cancelling above Government Order. Government *vide* G. O. No. HUD 368 MNG 77 dated 20th January 1978 have cancelled the earlier order.

Subsequently the Government on the representation from the Secretary, Holy Saint English School, in their order No. HUD 203 MNG 78 dated 3/4th July 1978 have withdrawn the Government

Order No. HUD 368 MNG 77 dated 20th January 1978 with the observation that the Bangalore City Corporation should hand over the possession of the site to the Holy Saint Education Society, imposing the conditions already laid down in Government Order No. HMA 43 MNG 77 dated 7th May 1977.

Now a suit *vide* No. O. S. 1755/77 in the Court of the I Additional Munsiff, Bangalore city has been filed by the Jayanaga, Welfare League and 3 other against (1) Corporation (2) Miss. Banur Principal, Holy Saint English School as Defendant for a permanant injunction from putting up construction or fencing on the said property. The Court has granted interim order against only the 2 defendant Miss. Banu restraining her from putting up either building of fencing. This order of injuction is operative. There is no injunction order against defendant No. 1 *i.e.* Corporation.

ಶ್ರೀ ಎಂ. ಚಂದ್ರಶೇಖರಿರ್.—ಅಧ್ಯಕ್ಷರೆ, ಈ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್‌ಗೆ ಸಂಬಂಧಪಟ್ಟಂತೆ ತಮಗೆ ಗೊತ್ತಿರಬಹುದು. ಹಿಂದೆ ಇದಕ್ಕೆ ಸಂಬಂಧಪಟ್ಟಂತೆ ಒಂದು ಪುಲ್ಲಿಯನ್ನು ಹಾಕಿದ್ದೇನೆ. ಜಯನಗರದಲ್ಲಿ ಒಂದು ಸಿನಿಮಾ ಥಿಯೇಟರ್ ರನ್ ಮಾಡುತ್ತಾ ಇದ್ದಾರೆ ಮಿಸ್ ಭಾನು ಎಂಬುವರು. ಜಯನಗರದ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಸಿನಿಮಾ ನಡೆಸುತ್ತಾ ಇರುವವರು ಇವರೇ. ಇವರ ಒಂದು ಕುಟುಂಬಕ್ಕೆ ಸೇರಿದವರೆಲ್ಲಾ ಸೇರಿ ಒಂದು ಪಾಠಶಾಲೆಯನ್ನು ನಡೆಸುತ್ತಾ ಇದ್ದಾರೆ. ಬೇಕಾದರೆ ನನ್ನಲ್ಲಿ ಪಟ್ಟಿ ಇದೆ ಕೊಡುತ್ತೇನೆ. ಇವರೆಲ್ಲಾ ಒಂದೇ ಸಂಸಾರಕ್ಕೆ ಸೇರಿದವರು ಈಗಾಗಲೇ ಸಿನಿಮಾ ಬಾಡಿಗೆ ಬಾಬತ್ತು, ಕಾರ್ಪೊರೇಷನ್‌ಗೆ ೨ ಲಕ್ಷ ರೂಪಾಯಿ ಪಣ ಕೊಡಬೇಕಾದ್ದು ಬಾಕಿ ಇದೆ. ಇನ್ನು ಬ್ಯಾಂಕ್‌ಗೆ ಎರಡು ಲಕ್ಷ ರೂಪಾಯಿ ಕೊಡಬೇಕಾಗುತ್ತದೆ. ಅದಕ್ಕೂ ಮೋಸ ಮಾಡುವ ರೀತಿಯಲ್ಲಿ ವ್ಯವಹಾರ ನಡೆಸುತ್ತಿದ್ದಾರೆ. ಇವರು ಹೋಲಿ ಸೇಯಿಂಟ್ ಏಜ್ಯುಕೇಷನ್ ಸೊಸೈಟಿ ಎಂದು ಮಾಡಿಕೊಂಡು ಒಂದು ಬಾಸಗಿ ಶಾಲೆ ನಡೆಸುತ್ತಿದ್ದಾರೆ ಅದರಲ್ಲಿ ಯಾವ ರೀತಿಯ ಫೀಸ್ ವಸೂಲಿ ಮಾಡುತ್ತಿದ್ದಾರೆ, ಯಾವ ರೀತಿ ಡೊನೇಷನ್ ವಸೂಲಿ ಮಾಡುತ್ತಿದ್ದಾರೆಂದರೆ ಅದನ್ನು ಹೇಳುವುದಕ್ಕೆ ಬರುವುದಿಲ್ಲ. ಜೊತೆಗೆ ಇದು ಸಾರ್ವಜನಿಕ ಸಂಸ್ಥೆಯಲ್ಲ. ಒಂದೇ ಸಂಸಾರಕ್ಕೆ ಸೇರಿದ ಅಣ್ಣತಮ್ಮಂದಿರು, ಅಕ್ಕತಂಗಿಯರು, ತಂದೆತಾಯಿಗಳು ಇವರಿಗೆ ಸೇರಿದ್ದು ಇದು ಇಂತಹ ಸಂಸ್ಥೆಗೆ ಕಾರ್ಪೊರೇಷನ್ನಿನ ಜಾಗವನ್ನು ಕೊಟ್ಟಿದ್ದಾರೆ. ಅದನ್ನು ಪ್ರತಿಭಟಿಸಿ ಅಲ್ಲಿಯ ಸಾರ್ವಜನಿಕರು ಪೋದವರ್ಷ ಸರ್ಕಾರಕ್ಕೆ ಹಾಗೂ ಕಾರ್ಪೊರೇಷನ್‌ಗೂ ಮನವಿ ಸಲ್ಲಿಸಿದ್ದಾರೆ. ಕಾರ್ಪೊರೇಷನ್ ಅಡ್ಮಿನಿಸ್ಟ್ರೇಟರ್ ಸರ್ಕಾರಕ್ಕೆ ಶಿಫಾರಸ್ಸುಮಾಡಿ ಸರ್ಕಾರ ಇದನ್ನು ರದ್ದುಮಾಡಿದ್ದರು. ಸಿ. ಐ. ಟಿ. ಬಿ. ಯವರು ಆಟವ ಮೈದಾನ ಈ ಖಾಲಿ ಜಾಗವನ್ನು ಕಾದಿರಿಸಿದ್ದು ಪುನಃ ಇಂತಹ ಸ್ಕೂಲಿಗೆ ಕೊಟ್ಟಿರುವುದು ಸರಿಯೇ ? ಜೊತೆಗೆ ಅಲ್ಲಿ ಒಂದು ಸರ್ಕಾರಿ ಸ್ಕೂಲು ನಡೆಸುತ್ತಿದ್ದಾರೆ ಅಲ್ಲಿ ಕೇವಲ ಮೂರು ಕೊಠಡಿಗಳು ಮಾತ್ರ ಇದ್ದು ಬೆಳಿಗ್ಗೆ ಪ್ರೈಮರಿ ಸ್ಕೂಲನ್ನು ನಡೆಸಿ ಮಧ್ಯಾಹ್ನದ ಮೇಲೆ ಹೈಸ್ಕೂಲು ನಡೆಸುತ್ತಿದ್ದಾರೆ ಇಂತಹ ಸರ್ಕಾರಿ ಶಾಲೆ ಇದ್ದರೂ ಕೂಡ ಈ ಬಾಸಗಿ ಶಾಲೆಗೆ ಕೇವಲ ೧೦೦೦ ರೂಪಾಯಿ ಬಾಡಿಗೆಯ ಮೇಲೆ ೫೦ ವರ್ಷ ಯಾವ ರೀತಿ ಲೀಸ್ ಕೊಟ್ಟಿದ್ದಾರೆಂದು ಹೇಳಿದರೆ ತಾವು ಅರ್ಥಮಾಡಿಕೊಳ್ಳಬೇಕು. ಇದನ್ನು ನೋಡಿದರೆ ಕಾರ್ಪೊರೇಷನ್‌ಗೆ ಮೋಸ ಮಾಡುವಂತಹ ಸಂಸ್ಥೆಗೆ ಸರ್ಕಾರ ಈ ಜಾಗವನ್ನು ದಯಮಾಡಿ ಕೊಡಬಾರದು. ಯಾರು ಈ ಶಾಲೆಯ ಜನರಲ್ ಸೆಕ್ರೆಟರಿಯಾಗಿದ್ದಾರೆ ಅವರೇ ಪೂನಮ್ ಥಿಯೇಟರ್ ನಡೆಸುತ್ತಾ ಇರುವವರು ಇವರೇ ಸರ್ಕಾರಕ್ಕೆ ಎರಡು ಲಕ್ಷರೂಪಾಯಿ ಕೊಡಬೇಗಿದ್ದವರು ಈ ಜಾಗವನ್ನು ಪಡೆಯುವುದಕ್ಕೆ ರಾಜಕೀಯ ಒತ್ತಡವನ್ನು ತಂದಿದ್ದಾರೆ, ಇವರಿಗೆ ರಾಜಕೀಯ ಇನ್‌ಫ್ಲ್ಯೂಯೆನ್ಸ್ ಇದೆ. ಟ್ರಿಸ್ಟ್‌ಜೋಡಿಸಿದವರು ಕ್ಯಾನ್ಸಲ್ ಮಾಡಿದ್ದನ್ನು ಮುಖ್ಯ ಮಂತ್ರಿಗಳ ಮುಖಾಂತರ ಪುನಃ ಪಡೆಯಬೇಕಾದರೆ ಇವರಿಗೆ ರಾಜಕೀಯ ಒತ್ತಡ ಇದೆ ಎಂದು ಹೇಳುತ್ತೀರಾ ಅಥವಾ ಇಲ್ಲವೆಂದು ಹೇಳುತ್ತೀರಾ ? ಇಂತಹ ಒಂದು ಸಂಸ್ಥೆಗೆ ದಯಮಾಡಿ ಕೊಡುಬಾರದು ಹಾಗೇನಾದರೂ ಒಂದು ಸಾರಿ ರದ್ದು ಮಾಡಿದನ್ನು ಮತ್ತೆ ಗ್ರಾಂಟ್ ಮಾಡಿದ್ದರೆ ಅವನ್ನು ರದ್ದುಮಾಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೆ, ಇದರಲ್ಲಿ ಯಾವ ರಾಜಕೀಯವೂ ಇಲ್ಲ ಅಥವಾ ಯಾವ ರಾಜಕೀಯ ಒತ್ತಡವೂ ಇಲ್ಲ ಈಗಾಗಲೇ ಪೂನಮ್ ಥಿಯೇಟರನ್ನು ಎವಿಕ್ಟ್ ಮಾಡಿ ಕಾರ್ಪೊರೇಷನ್ ಪೊಸಿಷನ್‌ಗೆ ತೆಗೆದುಕೊಂಡಿದೆ. ಬಾಕಿ ಇರುವ ಹಣವನ್ನು ಕಾನೂನು ಪ್ರಕಾರ ಪಡೆಯಬೇಕಾಗುತ್ತದೆ. ಇದಕ್ಕೆ ಮುಖ್ಯ ಮಂತ್ರಿಗಳ ಶಿಫಾರಸ್ಸು ಇಲ್ಲ ಪೂನಮ್ ಥಿಯೇಟರ್‌ಗೂ ಇದಕ್ಕೂ ಏನು ಸಂಬಂಧವಿಲ್ಲ. ಇವತ್ತು ಚಂದ್ರಶೇಖರ್ ಅವರು ಹೇಳಿದಾಗ ಅಲ್ಲಿ ಶಾಲೆ ಸೈಟು ಇದೆ. ಆ ಶಾಲೆಯಲ್ಲಿ ಒಂದು ಸಾವಿರ ಬಾಲಕ ಹಾಗೂ ಬಾಲಕಿಯರು ವ್ಯಾಸಂಗಮಾಡುತ್ತಿದ್ದಾರೆ. ಅಲ್ಲಿ ನಡೆಯುತ್ತ ಇರತಕ್ಕಂಥ ರೀತಿಯನ್ನು ಜನರು ಪ್ರತಿಭಟನೆ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಾ ಇದ್ದಾರೆ. ಈಗ ಅವರು ಎಲ್ಲಿ ಆ ಸ್ಕೂಲನ್ನು ನಡೆಸುತ್ತಾ ಇದ್ದರು ಅದನ್ನು ಅವರ ಮಾಲೀಕರು ರೆಂಟ್ ಕಂಟ್ರೋಲರ್ ಮುಖಾಂತರ ತಮ್ಮ ಸ್ವಂತಕ್ಕೆ ಬೇಕೆಂದು ವಾಪಸ್ ಪಡೆದಿದ್ದಾರೆ. ಆದ್ದರಿಂದ ಅಲ್ಲಿ ಶಾಲೆ ನಡೆಸುವುದಕ್ಕೆ ಬೇರೆ ಅವಕಾಶವಿಲ್ಲ. ಕಾರ್ಪೊರೇಷನ್‌ನವರು ಮೊದಲು ಕೊಟ್ಟಿದ್ದನ್ನು ಸರ್ಕಾರ ಕ್ಯಾನ್ಸಲ್ ಮಾಡಿದೆ ಅದು ಯಾವಾಗ ಮಾಡಿದೆ ಎಂಬುದು ಈಗ ಬೇಕಾಗಿಲ್ಲ. ಆದರೆ ಪುನಃ ಈ ಸರ್ಕಾರ ಬಂದ ಮೇಲೆ ಕೊಟ್ಟಿದೆ. ಇದರ ಬಗ್ಗೆ ನಮ್ಮ ಶಾಸಕರು ಒಂದು ಪತ್ರವನ್ನು ಬರೆದಿದ್ದಾರೆ ಅವರ ಸಲಹೆಯನ್ನು ಪರಿಶೀಲನೆಮಾಡಿ ನೋಡಿದೆ ಯಾವ ಶರತ್ತಿನ ಮೇಲೆ ಈ ಜಾಗವನ್ನು ಕೊಟ್ಟಿದೆ ಎಂದರೆ, ಆಟದ ಮೈದಾನಕ್ಕೆ ಜಾಗವನ್ನು ಮೀಸಲಾಗಿ ಇಡಬೇಕೆಂಬ ಶರತ್ತಿನ ಮೇಲೆ ಕೊಟ್ಟಿದ್ದಾರೆ. ಇದೇ ರೀತಿಯಾಗಿ ಖಾಸಗಿ ಶಾಲೆಗಳಿಗೆ ಬೇಕಾದಷ್ಟು ಜಾಗಗಳನ್ನು ಕೊಟ್ಟಿದ್ದಾರೆ. ಈ ಸಂಸ್ಥೆಯನ್ನು ನಡೆಸಕ ಂಥವರಿಗೂ ನಮ್ಮ ಮಾನ್ಯ ಸದಸ್ಯರಿಗೂ ಏನು ಭಿನ್ನಾಭಿಪ್ರಾಯವಿದೆಯೋ ನನಗೆ ಗೊತ್ತಿಲ್ಲ. ಆ ಶಾಲೆಯಲ್ಲಿ ಒಂದು ಸಾವಿರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮತ್ತು ಜಯನಗರದಲ್ಲಿ ಯಾರು ವಾಸಮಾಡುತ್ತಿದ್ದಾರೋ ಅವರ ಮಕ್ಕಳೇ ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆದರೂ ಸಹ ನಾನು ಸ್ಥಳಪರಿಶೀಲನೆಮಾಡಿ ಜಾಗವನ್ನು ನೋಡಿ ಇದರ ಬಗ್ಗೆ ಕಾರ್ಯಕ್ರಮವನ್ನು ಕೈಕೊಂಡಿದ್ದೇನೆ.

ಶ್ರೀ ಎಂ. ಚಂದ್ರಶೇಖರ್.—ಇದೇ ರೀತಿ ಪಲವಾರು ಶಾಲೆಗಳಿಗೆ ಕೊಟ್ಟಿದ್ದೀರಿ. ಕೆಲವು ಶಾಲೆಗಳವರು ಕೊಟ್ಟಂತಹ ಜಾಗಗಳನ್ನು ಪ್ಲೇಗ್ರೌಂಡ್‌ಗೆ ಉಪಯೋಗಿಸುತ್ತಿದ್ದಾರೆ. ಈ ಜಯನಗರದ ಖಾಲಿ ಪ್ರದೇಶದಲ್ಲಿ ಕಟ್ಟಡಗಳನ್ನು ಇನ್ನು ಮುಂದೆ ಕಟ್ಟುತ್ತಾ ಹೋದರೆ ಪ್ಲೇಗ್ರೌಂಡ್‌ಗೆ ಜಾಗ ಕಡಿಮೆ ಯಾಗುತ್ತದೆ. ಇದು ಲಂಗ್ ಸ್ಪೇಸ್, ಪ್ಲೇಗ್ರೌಂಡಗೆ ಎಂದು ರಿಸರ್ವ್ ಮಾಡಿರುವಂತಾದ್ದು.

೩-೦೦ ಪಿ. ಎಂ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೆ, ಈಜಾಗವನ್ನು ಪ್ಲೇಗ್ರೌಂಡ್ ಎಂದು ರಿಸರ್ವ್ ಮಾಡಿದ್ದಾರೆ. ಬಿ.ಡಿ. ಏ. ಅವರು ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ನಂತರವೇ ಕಾರ್ಪೊರೇಷನ್ ನವರು ಲ್ಯಾಂಡ್ ಕೊಟ್ಟಿರುವುದು. ಈ ಶಾಲೆ ನಡೆಯುವುದರಿಂದ ಅಲೆ ಯಾರಿಗೂ ಏನೂ ಕೊಂದರೆಯಾಗುವುದಿಲ್ಲ. ಇವೊತ್ತು ಶಾಲೆ ಅಲ್ಲಿ ಬರುವುದರಿಂದ ಅಲ್ಲಿ ವಾಸಮಾಡುವ ಜಯನಗರದ ನಿವಾಸಿಗಳಿಗೆ ತೊಂದರೆ ಏನನ್ನುವುದು ಕಂಡುಬಂದರೆ ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ ಸರ್ಕಾರ ಯಾರಿಗೂ ಇದನು ಕೊಡ ಬೇಡ ಕಡ್ಡಾಯವಾಗಿ ಕ್ಯಾನ್ಸಲ್ ಮಾಡಬೇಕು ಎಂದು ಹೇಳತಕ್ಕದ್ದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಎಂತಹವರು ಅದನ್ನು ನಡೆಸುತ್ತಿದ್ದಾರೆ ಎನ್ನುವುದು ನಿಮಗೆ ಗೊತ್ತಿದೆಯೆ? ಎಕ್ಸಪ್ಲಾಯಟೇಷನ್ ಮಾಡುವಂತಹ ಜನರು ನಡೆಸುತ್ತಿದ್ದಾರೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸುಮಾರು ಒಂದು ಸಾವಿರ ಮಕ್ಕಳು ಆ ಶಾಲೆಗೆ ಹೋಗಬೇಕಾದರೆ ಎಂತಹವರು ನಡೆಸುತ್ತಿದ್ದಾರೆ ?

ಶ್ರೀ ಎಂ. ಚಂದ್ರಶೇಖರ್.—ವಿಧಿ ಇಲ್ಲದೇ ಹೋಗುತ್ತಿದ್ದಾರೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅವರು ಎಂತಹವರು, ಅವರ ಗುಣ ನಮಗೆ ಬೇಕಾಗಿಲ್ಲ. ಇವೊತ್ತು ಶಾಲೆ ನಡೆಯುತ್ತಿದೆ. ಅಲ್ಲಿ ಒಂದು ಸಾವಿರ ಮಂದಿ ಬಾಲಕರು ಓದುತ್ತಿದ್ದಾರೆ. ನಾನು ಆ ಶಾಲೆಯ ಫಲಿತಾಂಶವನ್ನು ನೋಡಿದ್ದೇನೆ. ನೂರಕ್ಕೆ ತೊಂಭತ್ತೈದು ಮಕ್ಕಳು ತೇರ್ಗಡೆಯಾಗಿದ್ದಾರೆ. ಅಲ್ಲಿ ವಾಸಮಾಡತಕ್ಕ ಜನಗಳ ಮಕ್ಕಳೇ ಆ ಶಾಲೆಗೆ ಹೋಗುತ್ತಾ ಇರುವುದು. ಆ ಶಾಲೆಗೆ ಕಳುಹಿಸ ತಕ್ಕವರು ಯೋಚನೆ ಮಾಡಬೇಕು. ಅವರ ಗುಣ ಕಟ್ಟಿಕೊಂಡು ನಮಗೆ ಏನು ಆಗಬೇಕು.